INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -1, January--February, 2025,
PageNo,52- 59
Peer -Reviewed, Refereed Journal

# ರೇಖಾ ಕಾಖಂಡಕಿ ಅವರ 'ಹೊಸಹೆಜ್ಜೆ' ಕಾದಂಬರಿ; ಸಾಮಾಜಿಕ ತೊಡಕುಗಳು

**ಕಾವ್ಯ ಹೆಚ್ ಆರ್.**[1]

ಸಾಮಾಜಿಕ ಪರಿವರ್ತನೆಯನ್ನುಂಟು ಮಾಡುವಲ್ಲಿ ಸಾಹಿತ್ಯವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆರೋಗ್ಯಪೂರ್ಣ ಸಮಾಜವನ್ನು ನಿರ್ಮಿಸುವಲ್ಲಿ ಸಾಹಿತ್ಯವು ಔಷದಿ ಇದ್ದಂತೆ. ಕೇವಲ ಬಹಿರಂಗ ಚಳುವಳಿಗಳು, ಹೋರಾಟಗಳು, ಕಾನೂನುಗಳ ಮೂಲಕ ಮಾತ್ರ ಸಾಮಾಜಿಕ ಸ್ವಾಸ್ಥ್ಯ ಕಾಪಾಡಲಾಗುವುದಿಲ್ಲ. ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಸಾಹಿತ್ಯವು ತನ್ನದೆ ಆದ ಪ್ರಭಾವ ಬೀರಿದ್ದು, ಜಗತ್ತಿನ ನಾನಾ ಚಳುವಳಿಗಳು ಸಾಹಿತ್ಯದ ಮೂಲಕ ವ್ಯವಸ್ಥೆಯ ವಿರುದ್ಧ ಪ್ರತಿರೋಧವನ್ನೊಡ್ಡಿದೆ. ಸಾಮಾಜಿಕ ಸಮಸ್ಯೆಗಳಾದ ಅಸ್ಪ್ರಶ್ಯತೆ, ಆರ್ಥಿಕ ಅಸಮಾನತೆ, ವರ್ಗಸಂಘರ್ಷ, ಸಾಂಸ್ಕೃತಿಕ ಪ್ರತಿರೋಧ ಮುಂತಾದ ಸಮತೆಯ ಸಮಾಜದ ನಿರ್ಮಾಣಕ್ಕೆ ಮಾರಕವಾಗಿದೆ. ಇಂತಹದೆ ಸಾಮಾಜಿಕ ಸಮಸ್ಯೆಯುಳ್ಳ ವಸ್ತುವನ್ನಿಟ್ಟುಕೊಂಡು ರೇಖಾ ಕಾಖಂಡಕಿರವರು **'ಹೊಸಹೆಜ್ಜೆ'** ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕೃತಿಗೆ ವಿಶ್ವ ಭಾರತೀ ಪುರಸ್ಕಾರ ದೊರೆತಿದೆ. ಲೇಖಕಿಯು ಬಾಲ್ಯದಲ್ಲಿ ತನ್ನದೇ ಗ್ರಾಮೀಣ ಪರಿಸರದಲ್ಲಿ ಕಂಡಂತಹ ಲಂಬಾಣಿ ಜನಾಂಗದ ಮೇಲೆ ನಡೆದ ದೌರ್ಜನ್ಯ, ದಬ್ಬಾಳಿಕೆಯ ಘಟನೆಗಳನ್ನು ಕಥಾವಸ್ತುವನ್ನಾಗಿ ನಿರೂಪಿಸಿದ್ದಾರೆ. ಈ ಒಂದು ಕಾದಂಬರಿಯಲ್ಲಿ ಶತಶತಮಾನಗಳ ಪಿಡುಗಾಗಿ ಪರಿಣಮಿಸಿರುವ ಜಾತಿವ್ಯವಸ್ಥೆ, ಸ್ತ್ರೀ ಶೋಷಣೆ, ಜೀತಪದ್ಧತಿ ಅನಕ್ಷರತೆ, ನಿರುದ್ಯೋಗ, ಬಡತನ, ಸಾಲ, ಮದ್ಯ ವ್ಯಸನ, ಮೌಢ್ಯಾಚರಣೆಯಂತಹ ಅಂಶಗಳನ್ನು ಕಾದಂಬರಿಯು ಒಳಗೊಂಡಿದೆ. ನಾಗರಿಕ ಬದುಕಿನ ಕ್ರಮದ ಅರಿವಿನ ಕೊರತೆಯಿಂದಾಗಿ ಕಳಭಟ್ಟಿ ತಯಾರಿಕೆಯಂತಹ ದುಷ್ಕೃತ್ಯಕ್ಕೆ ತೊಡಗುವ ಮತ್ತು ಅದರಿಂದ ಉಂಟಾಗುವ ಸಮಸ್ಯೆಗಳನ್ನು ಆಧಾರಿಸಿ ಸಾಗುವುದು ಕತೆಯ ಮುಖ್ಯ ವಸ್ತುವಾಗಿದೆ. ಇಲ್ಲಿ ಲೇಖಕಿಯು ಲಂಬಾಣಿ ಸಮುದಾಯದಲ್ಲಿರುವ ಅತಿಯಾದ ಕುಡಿತದ ದುಶ್ಚಟಕೆ ಒಳಗಾದ ಇವರ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವ ಮೂಲಕ ಅರಿವನ್ನು ಮೂಡಿಸಿದ್ದಾರೆ.

---

1. **ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ , ಮಾನಸ ಗಂಗೋತ್ರಿ ಮೈಸೂರು.**

.

ಕಾದಂಬರಿಯ ಕತೆಯ ಪರಿಸರವು ಗೆದ್ದನಮಟ್ಟಿ ತಾಂಡದಲ್ಲಿ ಪ್ರಾರಂಭವಾಗುತ್ತದೆ. ತಾಂಡದ ಲಚ್ಮಾನು ತನ್ನ ಸಹಚರರೊಂದಿಗೆ ಸೇರಿ ಕಳ್ಳಭಟ್ಟಿ ತಯಾರಿಸಿ ಜನರಿಗೆ ಮಾರಾಟ ಮಾಡಿ ಜೀವನ ಸಾಗಿಸುತ್ತಿರುತ್ತಾನೆ. ಇನ್ನಿತರ ತಾಂಡದಲ್ಲಿ ಸಾರಾಯಿ ಕುಡಿದು ಆದ ದುರಂತಗಳು ಕಿವಿಗೆ ಬಿದ್ದರು ಸಹಿತ ಲಕ್ಷಿಸದೆ ದಂಧೆಯಲ್ಲೇ ನಿರತನಾಗಿರುತ್ತಾನೆ. ಆದರೆ ಅದೇ ಪರಿಸರದಲ್ಲಿ ಬೆಳೆದ ಜುಂಜನಾಯ್ಕರು ಆ ಹಾದಿಯನ್ನು ತುಳಿಯದೆ ತಹಶಿಲ್ದಾರರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ತನ್ನ ಜನಾಂಗದ ಉದ್ಧಾರಕ್ಕೆ ಶ್ರಮಿಸುವ ಜನನಾಯಕರಾಗಿ ಕಂಡುಬರುತ್ತಾರೆ. ಲಚ್ಮಾ ಮತ್ತು ಆತನ ಸಹಚರರು ಹೆದರುವುದು ಕೂಡ ಇವರೊಬ್ಬರಿಗಾದರೂ ಇವರ ಮಾತನ್ನು ಕೂಡ ಧಿಕ್ಕರಿಸಿ ನಡೆಯುತ್ತಿರುತ್ತಾರೆ. ಇದರ ಪರಿಣಾಮವಾಗಿ ಊರಿನ ಹುಲಿಗೆಮ್ಮ ಜಾತ್ರೆಯಲ್ಲಿ ಲಚ್ಮಾನೇ ಕಾಯಿಸಿದ ಸೆರೆ ಕುಡಿದು ಸಾಮೂಹಿಕವಾಗಿ ಮರಣಗೀಡಾಗುತ್ತಾರೆ. ಅದೇ ಸಮೂಹದಲ್ಲಿ ತನ್ನ ಪ್ರೀತಿಯ ಮಡದಿಯನ್ನು ಸಹ ಕಳೆದುಕೊಳ್ಳುತ್ತಾನೆ. ಈ ದುರಂತವನ್ನು ಕಣ್ಣಾರೆ ಕಂಡ ಲಚ್ಮಾ ಮಾನಸಿಕವಾಗಿ ವಿಚಲಿತನಾಗುತ್ತಾನೆ. ಮನುಷ್ಯನು ನಂಬಿಕೆಯನ್ನು ತನ್ನ ಅನೂಕೂಲಕ್ಕಾಗಿ ರೂಪಿಸಿಕೊಂಡಿದ್ದು ಕಾಲಾಂತರದಲ್ಲಿ ನಂಬಿಕೆ ಆಚರಣೆಯಾಗಿ ಬದುಕಿನ ಭಾಗವಾಗಿ ಮಾರ್ಪಡುತ್ತದೆ. ಮಾನವ ಜನಾಂಗವು ಆಚರಿಸಲ್ಪಡುವ ಎಲ್ಲಾ ಆಚರಣೆಗಳ ಮೂಲ ಸ್ವರೂಪ ನಂಬಿಕೆಯೇ ಆಗಿದೆ. ಯಾವುದೇ ಆಧಾರವಿಲ್ಲದ ಅರ್ಥಹೀನ ಆಚರಣ ಪದ್ಧತಿಗಳು ಮಾನವನ ಸಾಮಾಜಿಕ ಬದುಕಿನ ಹಿಂದುಳಿಯುವಿಕೆಗೆ ಕಾರಣವಾಗುತ್ತದೆ. ಮತ್ತು ಅದಕ್ಕೆ ಪ್ರತಿಯಾಗಿ ಮಾನವ ಸಮಾಜ ಬೆಲೆಯನ್ನು ಕಟ್ಟಲೆಬೇಕಾಗುತ್ತದೆ. ಎಂಬುವುದಕ್ಕೆ ಲಚ್ಮಾನ ಈ ಪ್ರಸಂಗವೆ ನಿದರ್ಶನವಾಗಿದೆ. ಹುಲಿಗೆಮ್ಮನ ಜಾತ್ರೆಯಲ್ಲಿ ತಯಾರಿಸಿದ ಹೆಂಡವನ್ನು ಮೊದಲು ದೇವಿಗೆ ಎಡಯನ್ನಿಟ್ಟು ಅನಂತರ ತಾಂಡದ ಜನರು ಪ್ರಸಾದವಾಗಿ ಸೇವಿಸುವ ಆಚರಣೆ ಹಿಂದಿನಿಂದಲು ಬೆಳೆದು ಬಂದಿದ್ದು, ಈ ಆಚರಣಾ ಪದ್ಧತಿಯೇ ಊರಿನ ಸಾಮೂಹಿಕ ಮಾರಣ ಹೋಮಕ್ಕೆ ಕಾರಣವಾಗುತ್ತದೆ. ಆದ ಅವಘಡವನ್ನು ಪ್ರತ್ಯಕ್ಷವಾಗಿ ಕಂಡರೂ ಹುಲಿಗೆಮ್ಮನ ಕೋಪವೇ ಸಾಮೂಹಿಕ ದುರ್ಮರಣಕ್ಕೆ ಕಾರಣವೆಂದು ತಿಳಿಯುತ್ತಾರೆ. ಆಚರಣ ಸಂದರ್ಭದಲ್ಲಿ ಮಡಿ ಮೈಲಿಗೆ, ಅನಾಚಾರದಂತಹ ಘಟನೆಗಳು ನಡೆದಿದ್ದರೆ ದೇವರು ಕೋಪಗೊಳ್ಳುತ್ತಾರೆ ಮತ್ತು ಅಂತಹ ಸಂದರ್ಭದಲ್ಲಿ ಇಂತಹ ಅವಘಡಗಳು ನಡೆಯುತ್ತದೆ ಎಂಬುದು ಜನರ ನಂಬಿಕೆಯಾಗಿದೆ. ಇಲ್ಲಿ ಜನರು ಆಚಾರ, ಸಂಪ್ರಾದಾಯದ ಹೆಸರಿನಲ್ಲಿ ಬಂಧಿಯಾಗಿರುವುದನ್ನು ನೋಡಬಹುದು. ಇದಕ್ಕೆ ಜನ ಸಮುದಾಯದಲ್ಲಿರುವ ಮುಗ್ದತೆ ಮತ್ತು ಸಾಮಾಜಿಕ ಪ್ರಜ್ಞೆಯ ಕೊರತೆ ಕಾರಣವಾಗಿದೆ.

ತಹಶೀಲ್ದಾರರಾದ ಜುಂಜನಾಯ್ಕರು ತಾಂಡದ ಜನರ ಮನಪರಿವರ್ತನೆಗೆ ಶ್ರಮಿಸಿ ಅಕ್ಷರಸ್ಥರನ್ನಾಗಿ ಮಾಡಬೇಕೆಂಬ ಆಶಾಭಾವನೆ ಹೊಂದಿದ್ದರು ಈ ಜನರು **'ಯಪ್ಪಾ ನಮ್ದೇನು ತಪ್ಪಿಲ್ಲ ಯಪ್ಪಾ ನಮ್ಮ ಹೊಟ್ಟಿ ದಂಧಾ'** ಎಂದು ನಿರ್ಭಯವಾಗಿ ಹೇಳುತ್ತಿದ್ದರು. ಇಲ್ಲಿ ಕಳ್ಳಭಟ್ಟಿ ದಂಧೆಯನ್ನು ಬಿಡದೆ ಅದಕ್ಕೆ

ಜೋತುಬಿದ್ದಿದ್ದು ಶ್ರಮವಹಿಸಿ ದುಡಿಯುವುದರ ಬಗ್ಗೆ ಇರುವ ತಿರಸ್ಕಾರ ಮತ್ತು ಆಲಸ್ಯದ ಮನೊಭಾವನೆ ಇವರ ಬದುಕಿನ ದಿಕ್ಕನ್ನು ಬುಡಮೇಲು ಮಾಡುವುದನ್ನು ಇಲ್ಲಿ ಕಾಣುತ್ತೇವೆ. ಪರಿಸ್ಥಿಯು ಮೊದಲಿನಂತಿಲ್ಲ ಎಂದು ಅರಿತ್ತಿದ್ದ ಲಚ್ಮಾನು ತನ್ನ ಮಗುವಿನೊಂದಿಗೆ ಹೊಸ ಮನುಷ್ಯನಾಗುವ ಆಶಾಭಾವನೆಯನ್ನು ಹೊಂದುತ್ತಾನೆ. ತನ್ನ ಹೆಂಡತಿಯ ಸಾವಿನಿಂದ ಮನಪರಿವರ್ತನೆಗೊಂಡ ಲಚ್ಮಾನು ವಾಸ್ತವವನ್ನು ಒಪ್ಪಿಕೊಳ್ಳಲಾಗದೆ ಊರು ಬಿಡುತ್ತಾನೆ. ತನ್ನ ಮಡದಿಯ ಅಣ್ಣನಾದ ಶಂಕ್ಲಾನ ಬಳಿಗೆ ತೆರಳುತ್ತಾನೆ. ಇಲ್ಲಿ ಲಚ್ಮಾನು ಇಡೀ ಸಮುದಾಯಕ್ಕೆ ಪಾತವಾಗುವುದರ ಮೂಲಕ ಹೊಸ ಬದುಕಿಗಾಗಿ ಹಾತೊರೆಯುದನ್ನು ಕಾಣುತ್ತೇವೆ. ಇಲ್ಲಿಂದ ಕಥೆಯು ಮತ್ತೊಂದು ರೂಪವನ್ನು ಪಡೆಯುತ್ತದೆ. ತನ್ನ ಮಗಳಾದ ರೂಪ್ಲಿಯ ಭವಿಷ್ಯಕ್ಕಾಗಿ ಹೊಸ ಮನುಷ್ಯನಾಗಲು ಲಚ್ಮಾ ಮುಂದಾಗುತ್ತಾನೆ. ಆದರೆ ಲಚ್ಮಾನು ಜೀವನ ಪರ್ಯಂತ ದೈಹಿಕವಾಗಿ ಶ್ರಮಿಸುವಂತಹ ಜೀತಪದ್ಧತಿಗೆ ಒಳಗಾಗುತ್ತಾನೆ. ಪ್ರಾರಂಭದಲ್ಲಿ **'ಜೀತಾ ಮಾಡ್ಕೊಂಡು ಮಂದಿ ಕಾಲ ನೆಕ್ಕಿ ಹೊಟ್ಟಿ ತುಂಬ್ಕೊಳ್ಳು ನಾಯಿ ಜಾತಿ ಅಲ್ಲ'** ಎಂದು ಹೇಳುತ್ತಿದ್ದ ಲಚ್ಮಾನು ಬದಲಾವಣೆಯ ಹರಿಕಾರನಾಗುವ ಬದಲು ದೇಸಾಯಿ ಮನೆತನದ ಜೀತದಾಳಗಿ ಸೇರಿ ಆತನ ದರ್ಪಕ್ಕೆ ಸಿಲುಕಿ ನಲುಗುತ್ತಾನೆ. ಇಡೀ ದುರ್ಗಾಪುರವೇ ದೇಸಾಯಿ ಶಂಕರೆಗೌಡನ ಕಾಲಡಿಯಲ್ಲಿದ್ದು, ಆಳುಗಳು ಜೋರಾಗಿ ಉಸಿರಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಬಡತನದ ಬೇಗೆಯಲ್ಲಿ ಬೇಯುವ ಜನರನ್ನು ಸಾಲದ ಸುಳಿಯಲ್ಲಿ ಸಿಕ್ಕಿಸಿ ಶೋಷಿಸುವ ನಿರ್ದಯೆ ಪ್ರಪಂಚವನ್ನು ಇಲ್ಲಿ ಕಾಣುತ್ತೇವೆ. ಹಾಗೂ ಜೀತಾದಾಳುಗಳನ್ನು ಬಾರುಕೋಲಿನಿಂದ ದಂಡಿಸುವ ಇಂತಹದೇ ಪ್ರಸಂಗವನ್ನು ಕಾರಾಂತರ **'ಚೋಮನ ದುಡಿ'**ಯಲ್ಲಿ ನೋಡಬಹುದು. ಅದೇ ಗ್ರಾಮದಲ್ಲಿ ಬದಲಾವಣೆಯನ್ನು ತರುವಲ್ಲಿ ಶ್ರಮಿಸುವ ವೈದ್ಯನಾದ ವಾಸುದೇವ ಹಾಗು ಶಿಕ್ಷಕರಾದ ಸಂಗಣ್ಣ ಮಾಸ್ತರರು ಮೇಲ್ವರ್ಗಕ್ಕೆ ಸೇರಿದ್ದರು ದಲಿತಪರ ಸಂವೇದನೆಯುಳ್ಳ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಸಾಮಾಜಿಕ ಪರಿವರ್ತನಕಾರರಾಗಿ ಕಂಡುಬರುತ್ತಾರೆ. ಜನರನ್ನು ಕುರಿತು **'ನೀವಂತೂ ನೊಗ ಕಟ್ಟಿದ ಎತ್ತ ಆಗೀರಿ ಏನಪ್ಪಾ, ನಿಮ್ಮಕ್ಕಳರ ನಾಲ್ಕಕ್ಷರ ಕಲೀಲಿ ಅವು ಮನಶ್ಯಾರ ಆಗಲಿ ಸಾಲಿಗಿ ಕಲಿಸಿರಿ'** ಎಂದು ಅಕ್ಷರ ಜ್ಞಾನದ ಬಗ್ಗೆ ಎಷ್ಟೇ ಅರಿವು ಮೂಡಿಸಿದರೂ ಅದು ಅಲ್ಲಿನ ಮುಗ್ದ ಜನರ ಅಂತರಂಗವನ್ನು ಮುಟ್ಟುತ್ತಿರಲಿಲ್ಲ. ಹಾಗೂ ಗೌಡರ ವಿರುದ್ಧ ನಿಲ್ಲುವ ಶಕ್ತಿಯು ಯಾರಲ್ಲೂ ಇರಲಿಲ್ಲ.

ಜೀತ ನಿರ್ಮೂಲನೆಗೆ ಶಿಕ್ಷಣವೇ ಮೂಲ ಅಸ್ತ್ರವೆಂದು ನಂಬಿದ್ದ ಸಂಗಣ್ಣ ಮಾಸ್ತರರ ನಿರಂತರವಾದ ಪ್ರಯತ್ನಕ್ಕೆ ಫಲ ಕೊಟ್ಟಿದ್ದು ಶಂಕ್ಲಾನ ಮಗನಾದ ದಾಮಲ್ಯಾ. ಆತನಿಗೆ ಶಿಕ್ಷಣದ ಜೊತೆ–ಜೊತೆಗೆ ಗರಡಿ ಮನೆಯಲ್ಲಿ ಕುಸ್ತಿ ಕಲಿಯುವಂತೆಯು ಪ್ರೊತ್ಸಾಹ ನೀಡುತ್ತಿದ್ದರು. ಹಾಗು ಗಿರಿಜನರಿಗಾಗಿ ಒಂದು ಅಂತರ್ ಪ್ರಜ್ಞೆಯಿಂದ ದುಡಿಯುತ್ತಿದ್ದರು. ಇವರಂತೆ ದುರ್ಗಾಪುರದ ಹರಿಜನರ ಮೂಕ ರೋದನೆಗೆ ತನ್ನ ವ್ಯಕ್ತಿತ್ವವನ್ನು ಮುಡುಪಾಗಿಟ್ಟಿಕೊಂಡವನು ವಾಸುದೇವ. ಬಡವ–ಬಲ್ಲಿದ, ಮೇಲು

ಕೀಳೆಂಬ ಜಾತಿಯ ಭೇಧವಿಲ್ಲದೆ ಯಾರೇ ಆರೋಗ್ಯ ಕೆಟ್ಟರು ಔಷಧಿ ಕೊಟ್ಟು ಸಂತೈಸಿ ಬರುವ ಗುಣದವನಾಗಿದ್ದನು. ಈತ ಬಂದ ಮೇಲೆ ಶೋಷಿತ ಹೊಲೆಯರ ಹಟ್ಟಿಗೆ ಜೀವ ಬಂದಂತೆ ಆಗಿರುತ್ತದೆ. **'ಯಪ್ಪ ನೀನ ಈಗ ದೇವರು ಬಂದ್ಹಂಗ ಬಂದಿಯಪ್ಪಾ ನಮ್ಮಂತ ಹೋಲೇರ ಹಟ್ಟಿಗೆ ಯಾರು ತಪಾಸನೆ ಮಾಡಾಕ ಬರ್ತಾರ'** ಎಂದು ಕೇಳುವಲ್ಲಿ ಜನರ ಮೂಕವೇದನೆ ಅರ್ಥವಾಗುತ್ತದೆ. ದುರ್ಗಾಪುರದ ಹೊಲೆಯರ ಬೀದಿಯಲ್ಲಿ ಪ್ರಸವ ವೇದನೆಯಿಂದ ಬಳಲುತ್ತಿದ್ದ ಬೆಳ್ಳಿ ಹೆರಿಗೆ ಮಾಡಿದ ಕಾರಣಕ್ಕಾಗಿ ವಾಸುದೇವನು ಗೌಡನ ಕೆಂಗಣ್ಣಿಗೆ ಗುರಿಯಾಗುತ್ತಾನೆ. **'ಏನೂ ದುರ್ಗಾಪುರದಾಗ ಡಾಕ್ಟರತಿ ಬಾಳ ಜೋರ ನಡ್ದದ ಕಾಣಿಸ್ತದ ನಡರಾತ್ರ್ಯಾಗ ಆ ಸೂಳೀ ಮಕ್ಕಳ ಗುಡಿಸಲಕ ಹೋಗೊದಂದ್ರ** ಏನು? **ಸೂಲಗಿತ್ತಿತನ ಮಾಡೂದಂದ್ರ ಏನು?'** ಎಂದು ಗದರಿಸುತ್ತಾ, ಮರುಕಳಿಸಿದರೆ ಬಹಿಷ್ಕಾರ ಹಾಕುವಂತೆ ಸೂಚಿಸಿ ಕಳುಹಿಸುತ್ತಾನೆ. ಅನಾರೋಗ್ಯದಿಂದ ಬಳಲುತ್ತಿದ್ದವರನ್ನು ಸಲಹುದನ್ನು ವಿರೋಧಿಸುವ ಗೌಡ ಇದೆ ಹೊಲಗೇರಿಗೆ ಕತ್ತಲಾದ ಬಳಿಕ ಬೆಳ್ಳಿ, ಕೆಂಚಿ, ದ್ಯಾಮಿಯರನ್ನು ಸೇರಿ ತನ್ನ ಕಾಮತೃಷೆ ಹಿಡೆರಿಸಿಕೊಳ್ಳುತ್ತಿದ್ದನು. ಜಾತಿಯ ವಿಚಾರವಾಗಿ ಮಡಿ, ಮೈಲಿಗೆ ಪ್ರತಿಪಾದಿಸುವ ಗೌಡನು ಲೈಗಿಂಕ ವಿಷಯದಲ್ಲಿ ಮಾತ್ರ ಜಾತಿ ಪರದೆ ಮೀರುವುದನ್ನು ಇಲ್ಲಿ ಕಾಣುತ್ತೇವೆ. ವರ್ಗ ಅಸಮಾನ ಸಮಾಜದಲ್ಲಿ ಹೆಣ್ಣನ್ನು ಬಳಸಿಕೊಳ್ಳುವಲ್ಲಿ ಯಾವುದೇ ನಿಷೇಧಗಳು, ಮೇಲು-ಕೀಳಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಹೆಣ್ಣಿನ ವಿಷಯದಲ್ಲಿ ಮಾತ್ರ ಜಾತಿ ಪರದೆ ಮೀರಿ ವರ್ತಿಸುತ್ತಿರುವುದನ್ನು ಇಲ್ಲಿ ಕಾಣುತ್ತೇವೆ. ಹೀಗೆ ಸೆರೆ, ಹೆಣ್ಣು, ಭೂಮಿ ಇವಿಷ್ಟೇ ಈತನಿಗೆ ಪ್ರಪಂಚವಾಗಿತ್ತು. ಈ ಎಲ್ಲಾ ಸವಾಲುಗಳ ಮಧ್ಯೆ ವಾಸುದೇವನು ಹೊಲಗೇರಿಯ ಜನರಿಗಾಗಿ ಶ್ರಮಿಸುತ್ತಿದ್ದು, ಜನರಿಗೆಲ್ಲ ಸಂಗಣ್ಣ ಮತ್ತು ವಾಸುದೇವನೆಂದರೆ ಒಂದು ರೀತಿಯ ಶಕ್ತಿ.

ದುರ್ಗಾಪುರದಲ್ಲೆ ಎದೆಯುಬ್ಬಿಸಿ ನಡೆಯುತ್ತಿದ್ದ ಮತ್ತೊಬ್ಬ ವ್ಯಕ್ತಿಯೆಂದರೆ ಅದು ವಾಸುದೇವನ ಅಕ್ಕನ ಗಂಡನಾದ ರಾಮಚಂದ್ರ, ಗೌಡನ ಹಂಗಿಗೆ ಒಳಗಾಗದೆ ಬೆಳೆದವನು. ಹಾಗೂ ವಾಸುವಿನಲ್ಲಿ ಬಡ-ಬಗ್ಗರಿಗೆ ಸೇವೆ ಸಲ್ಲಿಸುವಂತೆ ಕನಸನ್ನು ಅರಳಿಸಿದವನು. ಆದರೆ ಎದೆ ನೋವಿನಿಂದ ಅಕಾಲಿಕ ಮರಣಕ್ಕೆ ತುತ್ತಾಗುತ್ತಾನೆ. ಆತನ ಹೆಂಡತಿಯಾದ ಗೋದಳನ್ನು ಅನಿಷ್ಟ ಶಾಸ್ತ್ರ ಸಂಪ್ರಾದಾಯ ಪದ್ಧತಿಗಳಿಂದ ಬಂಧಿಸಲು ನೋಡುತ್ತಾರೆ. **'ನಿನ್ನ ತಲ್ಯಾಗ ಕೂದಲಿರೂ ತನಕಾ ನಿನ್ನ ಗಂಡಗ ಮುಕ್ತಿ ಸಿಗಂಗಿಲ್ಲ, ನರಕದಾಗ ಬಿದ್ದು ಹೊರಳಾಡಬೇಕಾಗ್ತದ ಇದು ನಮ್ಮ ಶಾಸ್ತ್ರವ, ನಮ್ಮ ಶಾಸ್ತ್ರ ಬಿಟ್ಟು ನಡದ್ರ ನಮ್ಮ ಧರ್ಮ ಏನು ಉಳದಂಗ ಆತು'** ಎಂದು ಇನ್ನು ಮೂವತ್ತರ ಹರೆಯದ ಗೋದಳ ಕೂದಲು ತೆಗೆದು ಕೆಂಪು ಸೀರೆ ಉಡಿಸಲು ಮುಂದಾಗುತ್ತಾರೆ. ಆದರೆ ಇದನ್ನು ವಿರೋಧಿಸುವ ವಾಸುದೇವ ಮತ್ತು ಗೋದಳಲ್ಲಿ ಗೊಡ್ಡು ಸಂಪ್ರಾದಾಯವನ್ನು ವಿರೋಧಿಸುವ ವೈಚಾರಿಕ ಮನೋಭಾವವನ್ನು ಕಾಣುತ್ತೇವೆ. ಭಾರತೀಯ ಸಮಾಜದಲ್ಲಿ ಗಂಡನನ್ನು ಕಳೆದುಕೊಂಡ ಹೆಣ್ಣಿಗೆ ಸಂಪ್ರಾದಾಯದ ಹೆಸರಿನಲ್ಲಿ ಕಡಿವಾಣ ಹಾಕಿ ಅವರ

ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದನ್ನು ಕಾಣುತ್ತೇವೆ. ಎಷ್ಟೇ ಕಾನೂನುಗಳು, ಯೋಜನೆಗಳು ಬಂದರು ಅವರನ್ನು ನಡೆಸಿಕೊಳ್ಳುವ ಪರಿಯೇ ಬೇರೆ ಇಂತಹದೇ ಅಂಶವನ್ನು ಈ ಕಾದಂಬರಿಯಲ್ಲಿ ಕಾಣುತ್ತೇವೆ. ಇಲ್ಲಿ ಒಂದು ಹೆಣ್ಣಿನ ಮನಸ್ಸಿಗಿಂತ ಧರ್ಮ, ಗೊಡ್ಡು ಸಂಪ್ರದಾಯವೇ ಮುಖ್ಯವಾಗಿದ್ದು, ಶಾಸ್ತ್ರವನ್ನು ಪಾಲಿಸದಿದ್ದರೆ ಗಂಡನಿಗೆ ಮುಕ್ತಿ ಸಿಗುವುದಿಲ್ಲ ನರಕಕ್ಕೆ ಹೋಗುತ್ತಾನೆ ಎಂದು ಆಕೆಯನ್ನು ಜೀವಂತವಾಗಿ ನರಕಕ್ಕೆ ನೂಕಲು ಪ್ರಯತ್ನಿಸುವುದನ್ನು ಕಾಣುತ್ತೇವೆ. ಗಂಡನ ಆದರ್ಶಗಳೊಂದಿಗೆ ಬದುಕುತ್ತಿದ್ದ ಗೋದ ಪ್ರಾರಂಭದಲ್ಲಿ ದಿಟ್ಟತನದಿಂದ ವಿರೋಧಿಸಿದರು ಶಂಕರೆಗೌಡನ ವಕ್ರದೃಷ್ಟಿ ತನ್ನ ಮೇಲಿದೆ ಎಂದು ತಿಳಿದು ಮಡಿಯಾಗುವುದರ ಮೂಲಕ ಅದೇ ಶಾಸ್ತ್ರ ಸಂಪ್ರದಾಯಗಳಿಗೆ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಇಲ್ಲಿ ಪರಿಸ್ಥಿತಿಯನ್ನು ಎದುರಿಸಲಾಗದೆ ತನ್ನಲ್ಲೆ ಆಕೆ ಬದಲಾವಣೆಗೆ ಒಡ್ಡಿಕೊಂಡರು ಆತನ ಕಾಮದಾಹಕ್ಕೆ ಬಲಿಯಾಗಿ ಆತನಿಂದಲೆ ಹತನಾಗುತ್ತಾಳೆ. ಅವಳ ಹಾಸಿಗೆಯಲ್ಲಿ ದೊರೆತ ಬಂಗಾರದ ಕಡಗ ಸಾವಿನ ಸತ್ಯ ಹೇಳಿದರೂ ಅದರ ವಿರುದ್ಧ ವಾಸುದೇವನು ಪ್ರತಿಭಟಿಸದೆ ಮೌನ ತಾಳುತ್ತಾನೆ. ಬದಲಾವಣೆಯ ಕನಸನ್ನು ಕಂಡಿದ್ದ ವಾಸುದೇವನು ಪರಿಸ್ಥಿತಿಯನ್ನು ಹೆದರಿಸಲಾಗದೆ ಊರು ಬಿಡುವ ಮೂಲಕ ಅಸಹಾಯಕನಂತೆ ಕಂಡುಬರುತ್ತಾನೆ.

ಜನರೆಲ್ಲಾ ಅಕ್ಷರಸ್ಥರಾದರೆ ನನ್ನ ಅವನತಿ ಖಚಿತವೆಂದು ಅರಿತ್ತಿದ್ದ ಶಂಕರೆಗೌಡನ ಮುಂದಿನ ಗುರಿ ಸಂಗಣ್ಣ ಮಾಸ್ತರರಾಗಿದ್ದು, ಗಿರಿಜನರಿಗೆ ಅಕ್ಷರ ಅಭ್ಯಾಸ ಮಾಡಿಸುವ ಕುರಿತು **'ಆ ವಾಡೆ ಸೂಳಿ ಮಕ್ಳಿಗೆ ಅಕ್ಷರ ಕಲಸ್ತಿಯಂತಲ್ಲಾ'** ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಸಂಗಣ್ಣ ಮಾಸ್ತರರು ಸರ್ಕಾರದ ಆದೇಶವಿದೆ ಎಂದು ಬುದ್ಧಿವಂತಿಕೆಯಿಂದ ಉತ್ತರ ನೀಡಿ ಜಾರಿಕೊಳ್ಳುತ್ತಿದ್ದರು. ವಾಸುದೇವ ಊರುಬಿಟ್ಟ ನಂತರ ತಾಂಡಾದಲ್ಲಿ ಕಾಲರಾ ಬಂದು ಒಂದೊಂದೆ ಜೀವಗಳು ಪಟಪಟನೆ ಬಿದ್ದು ಹೋಗುತ್ತವೆ. ಆ ಸಂದರ್ಭದಲ್ಲಿ ದಾಮಾಲ್ಯಾ ತಾಯಿ ಕೂಡ ಕಾಲಾರಕ್ಕೆ ಬಲಿಯಾಗುತ್ತಾಳೆ. ಹರೆಯಕ್ಕೆ ಬಂದ ತನ್ನ ಮಗನಾದ ದಾಮಲ್ಯಾ ಮತ್ತು ಲಚ್ಮಾನ ಮಗಳಾದ ರೂಪ್ಲಿಯ ಮದುವೆಯ ಕನಸನ್ನು ಕಂಡಿದ್ದ ಶಂಕ್ಲಾನು ಕಾಲಾಂತರದಲ್ಲಿ ಜೀತ ಪದ್ಧತಿಯಲ್ಲಿ ಬೆಂದು ಹಸುನೀಗುತ್ತಾನೆ. ಇತ್ತ ಕಡೆ ಪ್ರತಿಕಾರ ಪಡೆಯಲು ಸಿದ್ಧನಾಗುತ್ತಿದ್ದ ದಾಮಲ್ಯಾ ಅಪ್ಪನ ಸಾಲಕ್ಕಾಗಿ ಗೌಡನ ಹೊಲದ ಜೀತದಾಳಾಗಿ ತನ್ನ ಕೊರಳನ್ನು ನೀಡಲೇಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಈ ಜೀತಪದ್ಧತಿಯೇ ಹೀಗೆ, ಸರಪಳಿಯಂತೆ ಒಬ್ಬರ ನಂತರ ಒಬ್ಬರು ಅದಕ್ಕೆ ಜೀವಮಾನವಿಡೀ ತಲೆ ಕೊಡಲೆಬೇಕಾಗುತ್ತದೆ. **'ಜೀವ ಹೋಕ್ತೈತಿ ಗೌಡ್ರೆ... ಅಂದ್ರ ಕೆಲಸ ಮಾಡಿ ಜೀವ ಬಿಡಲೇ'** ಎನ್ನುತ್ತಿದ್ದಂತಹ ಕ್ರೂರ ವ್ಯಕ್ತಿತ್ವ ಇದ್ದ ಶಂಕರೆಗೌಡನ ಬಳಿ ಜೀತ ಕಠೋರವೆನಿಸಿದರು ಬೇರೆ ಮಾರ್ಗವಿರಲಿಲ್ಲ. ಇತ್ತ ಲಚ್ಮಾನು ರೂಪ್ಲಿಗಾಗಿ ದುರ್ಗಾಪುರಕ್ಕೆ ಬಂದು ಗೌಡನ ವಾಡೆಗೆ ತನ್ನ ಕೊರಳನ್ನು ನೊಗಕ್ಕೆ ಕಟ್ಟಿದೊಂದೆ ಗೊತ್ತು, ಕಣ್ಮುಚ್ಚಿ ದುಡಿತ ಆರಂಭಿಸಿದ ಮೇಲೆ ಮುಪ್ಪು ಆಗಿದ್ದೆ ಗೊತ್ತಾಗಲಿಲ್ಲ. ಸ್ವತಂತ್ರವಾಗಿ ಬಲಿತ ಹಕ್ಕಿಯಂತಿದ್ದ ಲಚ್ಮಾ ದುರ್ಗಾಪುರಕ್ಕೆ ಬಂದು ರೆಕ್ಕೆಗಳನ್ನೆಲ್ಲಾ

ಕತ್ತರಿಸಿದ ಹಕ್ಕಿಯಂತಾದ್ದನು. ಸಂಗಣ್ಣ ಮಾಸ್ತರರ ಪ್ರೇರಣೆಯಿಂದ ಒಂದು ವ್ಯಕ್ತಿತ್ವ ರೂಪಿಸಿಕೊಂಡಿದ್ದ ದಾಮಾಲ್ಯಾ ದುರ್ಗಾಪುರದ ಸೀತಿಮನಿಯ ಗರಡಿ ಮನೆಯಲ್ಲಿ ನುರಿತ ಕುಸ್ತಿಪಟುವಾಗಿದ್ದನು.

ದಾಮಾಲ್ಯನು ಕುಸ್ತಿಗಾಗಿ ನಿಪ್ಪಾಣಿಗೆ ಹೋಗಿದ್ದ ಸಮಯದಲ್ಲಿ ಲಚ್ಚಾನಿಗೆ ಆರೋಗ್ಯ ಸರಿಯಿಲ್ಲದ ಕಾರಣ ರೂಪ್ಲಿಯೆ ತನ್ನ ತಂದೆಯ ಜವಾಬ್ದಾರಿಯನ್ನು ನಿರ್ವಹಿಸುವ ಸಂದರ್ಭ ಎದುರಾಗುತ್ತದೆ. ಆಗ ತಾನೆ ಯವ್ವಾನಕ್ಕೆ ಕಾಲಿಟ್ಟಿದ್ದ ರೂಪ್ಲಿಯ ಸೌಂದರ್ಯ ಶಂಕರೇಗೌಡನ ನಿದಿರೆ ಕೆಡಿಸುತ್ತದೆ. ಕಾಡಿನಲ್ಲಿ ಪುಟಿಯುತ್ತಿದ್ದ ಚಿಗುರೆ ಮರಿಯನ್ನು ಮೃಗವೊಂದು ಹೊತ್ತು ಹೋದಂತೆ ಅವಳನ್ನು ಕತ್ತಲೆ ಕೋಣೆಗೆ ಎಳೆದೊಯ್ದು ಎಡಬಿಡದೆ ಎರಡು ದಿನಗಳ ಕಾಲ ಅವಳ ಮೇಲೆ ತೋಳದಂತೆ ಎರಗುವನು. ನಿಶ್ಯಕ್ತಿಯಿಂದ ನರಳುತ್ತಾ ಮಲಗಿದ್ದವಳನ್ನ ಹಿತ್ತಲ ಕಡೆ ಎಳೆತಂದು **'ಎಯ್ ಹರಾಮಿ ಹೆಣ್ಣೇ ಇಲ್ಲೇ ಆದದ್ದ ಏನಾದ್ರೂ ಮಂದಿ ಮುಂದ ಬಾಯಿಬಿಟ್ಟ ನಿನ್ನ ಗತಿ ನೋಡ್ಕೊ'** ಎಂದು ಎಂಜಲೆಲೆಯನ್ನು ಎಸೆಯುವಂತೆ ಹೊರಹಾಕಿದನು. ಅವಳ ಎದೆಯಲ್ಲಿ ಕ್ರೋಧ ಹತ್ತಿ ಉರಿಯುತ್ತಿತ್ತು. ವಾಡೆಯಲ್ಲಿ ಇಂತಹ ಅದೇಷ್ಟೋ ಹೆಣ್ಣು ಮಕ್ಕಳ ನೋವಿನ ಕತೆ ಇತ್ತೊ, ಆ ವಾಡೆಯೊಂದೆ ಅದಕ್ಕೆ ಮೂಕ ಸಾಕ್ಷಿಯಾಗಿತ್ತು.

ಗೌಡನ ದರ್ಪವನ್ನು ಮೂಟೆ ಕಟ್ಟುವಂತೆ ಶಕ್ತನಾಗಿ ಇದ್ದವನು ಶಂಕ್ಲಾನ ಮಗ ದಾಮಲ್ಯಾ ಒಬ್ಬನೆ. ಗೌಡನ ಅಮಲಿಗೆ ರೂಪ್ಲಿ ಬಲಿಯಾದ ವಿಚಾರವನ್ನು ತಿಳಿದ ದಾಮಾಲ್ಯಾನು ಆಕ್ರೋಶದಿಂದ **'ಆ ಹಲ್ಕಟ ಸೂಳೀ ಮಗ, ಇಷ್ಟ ತಾಕತ್ತ ಏಳ ರೂಪ್ಲಿ ಇನ್ನ ಸುಮಾಕ ಇರಾಂಗಿಲ್ಲ ಈಟ ದಿನಾ ಅಂವಾ ಮಾಡಿದ್ದಕ್ಕೆ ಬಾಯಿ ಮುಚಿಕೊಂಡ ಕುಂತಿವಿ ಇಲ್ಲಿ ತಗೀ ಇಂದ ಗೌಡನ ಹೆಣಾ ವಾಡೆದಾಗ ಮುಗಿಸೆ ನಾ ತಾಂಡೇಕ ಬರುಂವಾ'** ಎಂದು ನುಡಿಯುತ್ತಾನೆ. ಆದರೆ ಪರಿಸ್ಥಿತಿ ಹೆದರಿಸುವ ಶಕ್ತಿ ಇದ್ದರೂ ಧನಿ ಕೂಡಿಸುವವರು ಯಾರು ಎಂದು ಆಲೋಚಿಸಿ ಸಂಗಣ್ಣ ಮಾಸ್ತರರ ಅಭಿಪ್ರಾಯ ಕೇಳುತ್ತಾನೆ. ಅದಕ್ಕೆ ಜನರಿಗೆ ಎಚ್ಚೆತುಕೊಳ್ಳುವಂತೆ ಸಲಹೆ ನೀಡಿ **'ತಮ್ಮ ಹೆಂಡ್ರು ಮಗ್ಗಲಕ ಬಿದ್ದದ್ದು ನೊಡ್ಕೊಂಡು ಕಣ್ಣು ಮುಚ್ಕೊಂಡು ನಿಂದ್ರತಾವ ಆದ್ರ ಗೌಡ್ರ ಟಬರು ಜಾಸ್ತಿ ಆಗೇದಲಾ ಏನ ಆಗಲಿ ನಿಮ್ಮ ಜನ್ನಾನ್ನ ಒಂದು ಗೂಡ್ಸು ದಾಮಾಲ್ಯಾ ಗೌಡ್ರ ವಿರುದ್ಧ ಎತ್ತು ಕಟ್ಟು'**ಎಂದು ಸಲಹೆ ನೀಡುತ್ತಾರೆ. ಅದೇ ಸಂದರ್ಭದಲ್ಲಿ 'ಉಳುವವನೇ ಭೂಮಿಯ ಒಡೆಯ ಕಾಯ್ದೆ' ಜಾರಿಯಾಗಿರುತ್ತದೆ. ಅಂದರೆ ಎಂಬತ್ತರ ದಶಕದಲ್ಲಿ ನಡೆದಂತಹ ಘಟನೆಗಳನ್ನು ಆಧಾರಿಸಿ ಬರೆದಂತಹ ಕಥನವಾಗಿದೆ. ಗೌಡನ ವಿರುದ್ಧ ನಿಲ್ಲುವುದಕ್ಕೆ ಇದೇ ಸರಿಯಾದ ಸಮಯ ಎಂದು ಸಂಘಟನೆಯ ಅರಿವು ಮೂಡಿಸಲು ಪ್ರಯತ್ನಿಸುತ್ತಾರೆ. ಹಾಗೂ ಎಲ್ಲಾರನ್ನು ಸಂಘಟಿಸಿ ತಹಶಿಲ್ದಾರರಾದ ಜುಂಜನಾಯ್ಕರನ್ನು ಭೇಟಿ ಮಾಡಿ ನ್ಯಾಯ ದೊಕಿಸಿ ಕೊಡುವಂತೆ ಮನವಿ ಮಾಡುತ್ತಾರೆ. ಭೂ ಒಡೆತನದ ಕಾಯ್ದೆಯ ಪರಿಣಾಮವಾಗಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ರೈತರು, ಶೋಷಿತರು ಸಂಘಟನಾತ್ಮಕವಾಗಿ ಪ್ರತಿರೋಧ ತೋರುವುದನ್ನು ಇಲ್ಲಿ ನೋಡಬಹುದು.

ರೂಪ್ಲಿಯ ಪ್ರಕರಣವಾಗಿ ನಾಲ್ಕೈದು ದಿನ ಕಳೆದಿದ್ದು ಗೌಡನೊಂದಿಗೆ ಅನೈತಿಕ ಸಂಬಂಧ ಹೊಂದಿದ ಕೆಂಚಿಯನ್ನು ಕೆಣಕಿದಕ್ಕಾಗಿ ಪಂಚಾಯ್ತಿ ಕರೆಸಿ ಮಲವನ್ನು ತಿನ್ನುವಂತೆ ಅಮಾನವೀಯ ಶಿಕ್ಷೆಯನ್ನು ವಿಧಿಸುತ್ತಾನೆ. **'ಹ್ಣಂ ತಿನ್ರಲೇ ಮಕ್ಕಳ ತಿನ್ರಿ ಅದ್ರಾಗ ಹೊರಳಾಡೀದಲೆ ಈಗ ಅದನ್ನ ತಿನ್ನಾಕ ಒಲ್ಲೆ ಅಂತಿರೇನು'** ಎಂದು ಥಳಿಸುತ್ತಾನೆ. ಮಾನವ ಎಷ್ಟೇ ಮುಂದುವರೆದರು ಈ ಅಮಾನವೀಯ ಪದ್ಧತಿ ಇಂದಿಗೂ ಚಾಲ್ತಿ ಯಲ್ಲಿದೆ. ಭಾರತೀಯ ಸಮಾಜದಲ್ಲಿ ವ್ಯಕ್ತಿಯ ಕೆಲಸ ಮತ್ತು ಘನತೆಯನ್ನು ಜಾತಿಯೇ ನಿರ್ಧರಿಸುತ್ತದೆ. ಶತಶತಮಾನದಿಂದಲೂ ಮಲ ಹೊರುವ ಪದ್ಧತಿಯನ್ನು ನಿರ್ದಿಷ್ಟ ಸಮುದಾಯಕ್ಕೆ ನಿಗದಿ ಪಡಿಸಲಾಗಿದ್ದು ಜಾತಿವಾರುವಾಗಿ ಹೇಗೆ ಸಮುದಾಯವನ್ನು ಶೋಷಿಸುತ್ತಾರೆ ಎಂಬುದನ್ನು ಈ ನಿದರ್ಶನದ ಮೂಲಕ ಹಿಂದಿನ ಸ್ಥಿತಿಗತಿಯನ್ನು ಲೇಖಕಿ ತಿಳಿಸಿದ್ದಾರೆ. ಗೌಡನ ಅಸಹ್ಯ ವರ್ತನೆಗೆ ಕಡಿವಾಣ ಹಾಕಲೇಬೇಕು ಎಂದು ಸಂಗಣ್ಣ ಮಾಸ್ತರರು **'ಲೇ ನೀವು ಮೂಕ ಪ್ರಾಣಿ ಆಗಬ್ಯಾಡ್ರಲೆ ನಿಮ್ಮ ತಾಂಡೇಕ ಬೇಲಿ ಇಲ್ಲಂತ ಆ ಗೌಡ ಗೂಳಿ ಹಂಗ ಎಲ್ಲಾದ್ನೂ ಹರಗಾಕ ಹತ್ಯಾನ ನೀವು ಹಿಂಗ ಸುಮಕ ಇದ್ರ ನಾಳೇ ಇಡೀ ತಾಂಡೇನ ನಾಶ ಮಾಡ್ತಾನ'** ಎಂದು ಹೇಳಿದ ಸಂಗಣ್ಣ ಮಾಸ್ತರರ ಒಂದೊಂದೆ ಮಾತು ಎಲ್ಲಾರ ಎದೆಯಲ್ಲೂ ಕಿಡಿ ಹೊತ್ತಿಸುತ್ತದೆ. ಎಲ್ಲರೂ ಅವನ ವಾಡೆಯಲ್ಲಿ ಕೆಲಸಕ್ಕೆ ವಿದಾಯ ಹೇಳುತ್ತಾರೆ. ಎಲ್ಲರ ಎದೆಯಲ್ಲೂ ಪ್ರತಿಭಟನೆಯ ಕಾವು ಏರುತ್ತದೆ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಜನರು ಗುಂಪು ಗುಂಪಾಗಿ ದುರ್ಗಾಪುರದ ದಿಬ್ಬವನ್ನೇರಿ ಇಳಿದು ವಾಡೆಯ ಕಡೆಗೆ ಧಾವಿಸಿದರು. ಸೂರ್ಯ ಕೆಂಡಾ ಮಂಡಲವಾಗಿ ಉರಿಯುವಂತೆ ನಿಂತ ಜನರ ಕಣ್ಣುಗಳು ಕೆಂಡದುಂಡೆಗಳಂತೆ ಉರಿಯುತ್ತಿದ್ದವು. ತಮ್ಮ ಎರಡು ರಟ್ಟೆಗಳು ಇರುವುದೇ ಗೌಡನ ಜೀತಕ್ಕಾಗಿ ಎಂದು ನಂಬಿದ್ದ ಜನರು ಗೌಡನ ದೌರ್ಜನ್ಯದಿಂದ ಕಂಗೆಟ್ಟ ಎಲ್ಲರ ಎದೆಯಲ್ಲೂ ಕ್ರೋಧದ ಕಿಡಿಗಳು ಹತ್ತಿದ್ದವು. ಸಾಂಪ್ರದಾಯಿಕ ಜಾತಿಬದ್ಧ ಸಮಾಜದ ಗುಲಾಮತನದ ವಿರುದ್ಧ ಹೋರಾಡಲು ಸಜ್ಜಾಗುವ ಜನರ ಗುಂಪನ್ನು ನೋಡಿದಾಗ ದಲಿತ ಕವಿ ಸಿದ್ಧಲಿಂಗಯ್ಯರವರ **'ಸಾವಿರಾರು ನದಿಗಳು'** ಕವನ ನೆನಪಾಗುತ್ತದೆ. ಅನಾದಿ ಕಾಲದಿಂದಲೂ ಶೋಷಣೆಗೆ ಒಳಗಾದ ಸಮುದಾಯ ಒಮ್ಮೆಲೆ ಗುಡುಗಿದಾಗ ಅದರ ಪ್ರಖರತೆಯನ್ನು ತಡೆದುಕೊಳ್ಳುವುದು ಬಹಳ ಕಠಿಣ. ಹಾಗೆ ರೊಚ್ಚಿಗೆದ್ದ ಜನಸಮೂಹ ನ್ಯಾಯಕ್ಕಾಗಿ ಗೌಡನ ವಾಡೆಯ ಬಳಿ ಧಾವಿಸಿದ್ದು **'ಕಾಯ್ದೆಶಿರ ಹೊಲಾ ನಮ್ದು'** ಎಂದು ಹೇಳುವಲ್ಲಿ ಜನರ ಆಕ್ರೋಶ ಮತ್ತು ಶತ ಶತಮಾನಗಳಿಂದ ಅನುಭವಿಸಿದ ನೋವು ವ್ಯಕ್ತವಾಗುತ್ತದೆ. ಉಳುವವನೆ ಭೂಮಿಯ ಒಡೆಯ ಕಾಯ್ದೆಯು ಹಿಂದುಳಿದ ಜನಾಂಗದ ಆಶಾಕಿರಣವಾಗಿ ಮೂಡಿಬಂದಿದೆ.

ಕಾದಂಬರಿಗಾರ್ತಿಯು ಆ ಕಾಲಘಟ್ಟದ ಅಸ್ಪ್ರಶ್ಯತೆ, ಊಳಿಗಮಾನ್ಯ ವ್ಯವಸ್ಥೆ, ವರ್ಗ ಅಸಮಾನತೆ, ಮೂಡನಂಬಿಕೆ, ಅನಕ್ಷರತೆ, ಬಡತನ ಈ ಎಲ್ಲಾ ಅಂಶಗಳನ್ನು ಕಾದಂಬರಿಯಲ್ಲಿ ಸೆರೆ ಹಿಡಿದಿದ್ದು ಜನರು ತಮ್ಮ ಹಕ್ಕನ್ನು ನಿರ್ಭಯವಾಗಿ ಕೇಳುವಲ್ಲಿ ಶಿಕ್ಷಣ ಮತ್ತು ಸಂಘಟನೆ ಅವಶ್ಯಕತೆಯನ್ನು ತಿಳಿಸುತ್ತಾರೆ.

ಕಾದಂಬರಿಯು ಆಶಾವಾದದಲ್ಲಿ ಮುಕ್ತಾಯವಾಗುತ್ತದೆ. ಇಲ್ಲಿ ದುರ್ಬಲ ವರ್ಗದ ಜನ ತಮ್ಮ ಮೇಲೆ ಶತ ಶತಮಾನಗಳಿಂದ ನಡೆಯುತ್ತಾ ಬಂದ ದೌರ್ಜನ್ಯವನ್ನು ಪ್ರತಿಭಟಿಸಿ ಸವೆದು ಹೋದ ದಾರಿಯಲ್ಲಿ **'ಹೊಸ ಹೆಜ್ಜೆ'** ಹಾಕುವ ಧೈರ್ಯವನ್ನು ನಾವು ಇಲ್ಲಿ ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು :**


೧. ಅಮೂರ. ಜಿ.ಎಸ್ – ಆಧುನಿಕ ಕಥನ ಸಾಹಿತ್ಯ: ಕಾದಂಬರಿ, ಸ್ವಪ್ನ ಬುಕ್ ಹೌಸ್ ಬೆಂಗಳೂರು, ಮೊದಲ ಮುದ್ರಣ ೧೯೯೪, ಪರಿಷ್ಕೃತ ಆವೃತಿ ೨೦೧೪.

**೨.** ಗಂಗಾನಾಯಕ್ ಕೆ.ಎನ್ – ಲಂಬಾಣಿ ಇತಿಹಾಸ ಮತ್ತು ಸಂಸ್ಕೃತಿ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೨೦೦೭.

**೩.** ರೇಖಾ ಕಾಖಂಡಕಿ – ಹೊಸ ಹೆಜ್ಜೆ, ಜನಸಾಹಿತ್ಯ ಪ್ರಕಾಶನ, ೧೯೯೦

೪. ಶಿವರಾಮ ಕಾರಂತ. ಕೆ – ಚೋಮನ ದುಡಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೧.

೫. ಸಿದ್ಧಲಿಂಗಯ್ಯ – ನನ್ನ ಜನಗಳು ಮತ್ತು ಇತರೆ ಕವಿತೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೧೦